ಕುವೆಂಪು ವಿಶ್ವವಿದ್ಯಾಲಯ

ನಿರ್ದೇಶಕರು
ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ.

ನಿರ್ದೇಶಕರ ಕಾರ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ
ಶಿವಮೊಗ್ಗ-577451,ಕರ್ನಾಟಕ

ಸಂಖ್ಯೆ: ಕುವಿ:ಪಿಎಂಇ-01: 57 :2019-20,

ದಿನಾಂಕ: 26-11-2019

## ಸುತ್ತೋಲೆ

ವಿಷಯ: ರಾಷ್ಟ್ರಿಯ ಶಿಕ್ಷಣ ನೀತಿ-2019 ಕುರಿತು ಒಂದು ದಿನದ ವಿಶೇಷ ಉಪನ್ಯಾಸ ನಡೆಸುವ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 25/11/2019

ವಿಶ್ವವಿದ್ಯಾಲಯದ ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ವತಿಯಿಂದ, **ರಾಷ್ಟ್ರಿಯ ಶಿಕ್ಷಣ ನೀತಿ – 2019,** (National Education Policy - 2019) ಕುರಿತು ಒಂದು ದಿನದ ವಿಶೇಷ ಉಪನ್ಯಾಸವನ್ನು ಏರ್ಪಡಿಸಿದ್ದು, ಈ ಉಪನ್ಯಾಸದ ಸಂಪನ್ಮೂಲವ್ಯಕ್ತಿಯಾಗಿ **ಪ್ರೊ. ಎಂ. ಕೆ. ಶ್ರೀಧರ್**, ಸದಸ್ಯರು N.E.P-2019 ಕರಡು ಸಮಿತಿ ಹಾಗೂ ನಿಕಟಪೂರ್ವ ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ಆಯೋಗ, ಬೆಂಗಳೂರು, ಇವರು ಆಗಮಿಸಲಿದ್ದು, ಈ ಕಾರ್ಯಕ್ರಮಕ್ಕೆ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು, ಅಧ್ಯಾಪಕರುಗಳು, ಮತ್ತು ಅತಿಥಿ ಉಪನ್ಯಾಸಕರು ಹಾಗೂ ವಿಶ್ವವಿದ್ಯಾಲಯದ ಘಟಕ/ನೇರ ಆಡಳಿತಕ್ಕೊಳಪಡುವ ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರುಗಳು ಹಾಗೂ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಆಸಕ್ತ ಅಧ್ಯಾಪಕರುಗಳು ಹಾಜರಾಗಬೇಕೆಂದು ತಿಳಿಸಲಾಗಿದೆ.

1. *ಈ ವಿಶೇಷ ಉಪನ್ಯಾಸದಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ವಿಶ್ವವಿದ್ಯಾಲಯದವತಿಯಿಂದ ಪ್ರಯಾಣ/ದಿನಭತ್ಯೆಯನ್ನು ಪಾವತಿಸಲಾಗುವುದಿಲ್ಲ.*
2. *ಈ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಮದ್ಯಾಹ್ನ ಭೋಜನದ ವ್ಯವಸ್ಥೆಯನ್ನು ವಿಶ್ವವಿದ್ಯಾಲಯದ ವತಿಯಿಂದ ವ್ಯವಸ್ಥೆಗೊಳಿಸಲಾಗುವುದು.*

**ದಿನಾಂಕ: 06/12/2019ರಂದು ಬೆಳಿಗ್ಗೆ:11:00 ಘಂಟೆ.**

**ಸ್ಥಳ: ಪ್ರೊ: ಎಸ್. ಪಿ. ಹಿರೇಮಠ ಸಭಾಂಗಣ. ಕುವೆಂಪು ವಿಶ್ವವಿದ್ಯಾಲಯ. ಜ್ಞಾನಸಹ್ಯಾದ್ರಿ, ಶಂಕರಘಟ್ಟ.**

ಕರಡು ಕುಲಸಚಿವರಿಂದ
ಅನುಮೋದಿಸಲ್ಪಟ್ಟಿದೆ.

26/11/19

ನಿರ್ದೇಶಕರು
ಯೋಜನೆ, ಮೇಲ್ವಿಚಾರಣೆ ಹಾಗೂ
ಮೌಲ್ಯ ಮಾಪನ ಮಂಡಳಿ
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

ಗೆ:

1. ಅಧ್ಯಕ್ಷರುಗಳು ಎಲ್ಲಾ ಸ್ನಾತಕೊತ್ತರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ. ಜ್ಞಾನಸಹ್ಯಾದ್ರಿ, ಶಂಕರಘಟ್ಟ/ಕಡೂರು/ಶಿವಮೊಗ್ಗ/ಚಿಕ್ಕಮಗಳೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಸ್ನಾತಕ ಪದವಿಯ ಘಟಕ/ನೇರ ಆಡಳಿತಕ್ಕೊಳಪಟ್ಟಿರುವ ಹಾಗೂ ಎಲ್ಲಾ ಸಂಯೋಜಿತ ಕಾಲೇಜುಗಳು.
3. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ. ಜ್ಞಾನಸಹ್ಯಾದ್ರಿ, ಶಂಕರಘಟ್ಟ
4. ಕುಲಸಚಿವರು(ಮೌಲ್ಯಮಾಪನ)/ ಕುವೆಂಪು ವಿಶ್ವವಿದ್ಯಾಲಯ. ಜ್ಞಾನಸಹ್ಯಾದ್ರಿ, ಶಂಕರಘಟ್ಟ
5. ಆಪ್ತ ಕಾರ್ಯಾಲಯ/ಕುಲಪತಿಗಳು/ ಕುಲಸಚಿವರು/ ಹಣಕಾಸು ಅಧಿಕಾರಿಗಳು/ ಕುಲಸಚಿವರು(ಮೌಲ್ಯಮಾಪನ) ಕುವೆಂಪು ವಿಶ್ವವಿದ್ಯಾಲಯ. ಜ್ಞಾನಸಹ್ಯಾದ್ರಿ, ಶಂಕರಘಟ್ಟ
6. ನಿರ್ದೇಶಕರು ಐ.ಕ್ಯೂ.ಎ.ಸಿ. ಕುವೆಂಪು ವಿಶ್ವವಿದ್ಯಾಲಯ. ಜ್ಞಾನಸಹ್ಯಾದ್ರಿ, ಶಂಕರಘಟ್ಟ
7. ಕಛೇರಿ ಪ್ರತಿ.

Scanned by CamScanner